2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರ: 262/2025
ಸಿಡಬ್ಲ್ಯೂ- 1
ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | : | ರಿತೇಶ ಎನ್ ಪುತ್ರನ್ |
| ತಂದೆಯ ಹೆಸರು | : | ನಾಗೇಶ ಪುತ್ರನ್ |
| ಪ್ರಾಯ | : | 32 ವರ್ಷ |
| ಉದ್ಯೋಗ | : | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| ವಾಸ | : | ಹೆಬ್ರಿ |

ದಿನಾಂಕ: **06-09-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನನಗೆ ಆರೋಪಿತನ ಪರಿಚಯ ಇರುತ್ತದೆ. ಮಡಾಮಕ್ಕಿ ಗ್ರಾಮ ಪಂಚಾಯತಿಯ ಅಂಗಡಿ ಕೋಣೆಯನ್ನು ಆರೋಪಿಗೆ 2022-2025 ರವರೆಗೆ ಎಲಂಗೆ ಕೊಟ್ಟಿದ್ದೇವು. 3 ವರ್ಷ ಮುಗಿದ ನಂತರ ಮರು ಎಲಂ ಮಾಡಬೇಕಾಗಿತ್ತು. ನಾವು ಎಲಂ ಮಾಡುವ ಸಲುವಾಗಿ ಸಾರ್ವಜನಿಕ ಪ್ರಕಟಣೆ ಮೊದಲು ಮಾಡಿದ್ದು, ಯಾರು ಭಾಗವಹಿಸಿರುವುದಿಲ್ಲ. ಅದಾದ ನಂತರ 2 ನೇ ಪ್ರಕಟಣೆ ಮಾಡಿದ್ದೇವು, ಆಗಲೂ ಸಹ ಯಾರು ಭಾಗವಹಿಸಲಿಲ್ಲ. ಆದಾದ ನಂತರ 3 ಬಾರಿ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದೇವು. ಪ್ರಕಟಣೆ ಆದ ಮೇಲೆ 4 ಜನ ಅಶಜಿಯನ್ನು ಸಲ್ಲಿಸಿದ್ದು 3 ಜನ ಮಾತ್ರ ಎಲನಲ್ಲಿ ಭಾಗವಹಿಸಿರುತ್ತಾರೆ

2. ಎಲಂ ಆದ ನಂತರ ಆರೋಪಿ ಅತೀಹೆಚ್ಚಿನ ಬಿಡ್ಡನ್ನು ಅವರು ಕೂಗಿದ್ದು, ಅದನ್ನು ತೆಗೆದುಕೊಳ್ಳಿ ಎಂದು ಕೇಳಿದಾಗ ಆತ ಬಿಡ್ಡಿನ ನಿಯಮದಂತೆ 8 ತಿಂಗಳ ಬಾಡಿಗೆಯನ್ನು ಅದೇ ದಿನ ಕಟ್ಟಬೇಕಾಗಿದ್ದು, ನಾವು ಹಣ ಕಟ್ಟಿ ಎಂದು ಆರೋಪಿಗೆ ಕೇಳಿರುತ್ತೇವೆ. ಅದೇ ದಿನ ಅವರು ಹಣ ಕಟ್ಟಿರಲಿಲ್ಲ. ಮರುದಿನ ಅವರಿಗೆ ಕರೆ ಮಾಡಿ ಕೇಳಿದಾಗ ಅವರು ನನಗೆ ಅಂಗಡಿ ಕೋಣೆಬೇಡ ಅಂತಾ ಹೇಳಿರುತ್ತಾರೆ. ನಿಯಮದ ಪ್ರಕಾರ 2 ನೇ ಹೆಚ್ಚಿಗೆ ಕೂಗಿದಂತ ಬಿಡ್ಡರ್ ಗೆ ಅದನ್ನು ಕೊಡಬೇಕಾಗಿದ್ದು, ರಂಜಿತ್ ಶೆಟ್ಟಿರವರಿಗೆ ಹೇಳಿದ್ದು, ಅವರು ಬಂದು ಬಿಡ್ ನ ಹಣವನ್ನು ಕಟ್ಟಿ ಅಂಗಡಿಯ ಕೀ ಕೊಡಿ ಅಂತಾ ಕೇಳಿರುತ್ತಾರೆ.

3. ಕೀ ಆರೋಪಿಯ ಬಳಿ ಇದ್ದು, ಫೆಬ್ರುವರಿ 7 ನೇ ತಾರೀಖಿನ ಒಳಗಾಗಿ ಕೀಯನ್ನು ತಂದು

ಹಾಜರುಪಡಿಸಿ ಅಂತಾ ನೋಟಿಸು ಕೊಟ್ಟಿರುತ್ತೇನೆ. ಆತ ಕೀಯನ್ನು 7 ನೇ ತಾರೀಖಿನವರೆಗೂ ತಂದು ಕೊಟ್ಟಿರುವುದಿಲ್ಲ. 8 ಮತ್ತು 9 ಶನಿವಾರ ಮತ್ತು ಭಾನುವಾರ ರಜಾ ಇದ್ದು, 10 ನೇ ತಾರೀಖು ಬೆಳಿಗ್ಗೆ ನಾನು ಹೋಗಿ ನೋಡಿದಾಗ ಅಲ್ಲಿ ಕೀ ಹಾಕಿತ್ತು ಕಟ್ಟಡದ ಕೋಣೆಯ ಎದುರು ಕಡುಮಾಡನ್ನು ಕಳಚಿ ಪೂರ್ತಿ ತೆಗೆದುಕೊಂಡು ಹೋಗಿದ್ದರು. ನಾನು ಈ ವಿಚಾರವನ್ನು ಅಧ್ಯಕ್ಷರ ಗಮನಕ್ಕೆ ತಂದಿರುತ್ತೇನೆ. ಅಧ್ಯಕ್ಷರು ಪರಿಶೀಲನೆ ಮಾಡಿ ಈ ಬಗ್ಗೆ ದೂರು ಕೊಡುವಂತೆ ನನಗೆ ತಿಳಿಸಿರುತ್ತಾರೆ.

4. ಅದಾದ ನಂತರ ನಾನು ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಸಾಕ್ಷಿಗೆ ಪ್ರಥಮ ವರದಿಯನ್ನು ನೋಡಿ ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಪ್ರಥಮ ವರದಿಯನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ನಂತರ ದಿಃ 22-02-2025 ರಂದು ತನಿಖಾಧಿಕಾರಿ ನಮಗೆ ಪತ್ರ ಬರೆದು ದಾಖಲೆ ಕೊಡುವಂತೆ ಕೋರಿದ್ದು, ನಾನು ಅವರ ಪತ್ರದಂತೆ 10 ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ನುಡಿದು ದಿಃ 01-03-2025 ರ ಪತ್ರ, ದಿಃ 31-05-2005 ರ ಕರ್ನಾಟಕ ಸರ್ಕಾರದ 2003-04 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ದೃಢೀಕೃತ ನಕಲು, ದಿಃ 31-07-2007 ರ 2005-06 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ದೃಢೀಕೃತ ನಕಲು, ಮಡಾಮಕ್ಕಿ ಗ್ರಾಮ ಪಂಚಾಯತಿ ಅನುಬಂಧ-3 ರ ದೃಢೀಕೃತ ನಕಲು, 2021-22 ನೇ ಸಾಲಿನ ಮಡಾಮಕ್ಕಿ ಗ್ರಾಮ ಪಂಚಾಯತಿ ಮಡಾಮಕ್ಕಿ ಗ್ರಾಮದ ಅಂಗಡಿ ಕೋಣೆ ತಿಂಗಳ ಬಾಡಿಗೆ ರಜಿಸ್ಟರ್ ದೃಢೀಕೃತ ನಕಲು, ದಿಃ 26-12-2024 ರ ಮಡಾಮಕ್ಕಿ ಗ್ರಾಮ ಪಂಚಾಯತಿ ಅಂಗಡಿ ಕೋಣೆಯ ನಿರ್ವಹಣಾ ಬುಕ್ಕಿನ ಬಹಿರಂಗ ಎಲಂ ಪ್ರಕಟಣೆಯ ದೃಢೀಕೃತ ನಕಲು, ದಿಃ 13-01-2021 ರ ಮಡಾಮಕ್ಕಿ ಗ್ರಾಮ ಪಂಚಾಯತಿ ಅಂಗಡಿ ಕೋಣೆಯ ನಿರ್ವಹಣಾ ಬುಕ್ಕಿನ ಬಹಿರಂಗ ಎಲಂ ಪ್ರಕಟಣೆಯ ದೃಢೀಕೃತ ನಕಲು, ದಿಃ 23-01-2025 ರ ಎಲಂ ಪ್ರಕರಣೆಯ ದೃಢೀಕೃತ ನಕಲು, ದಿಃ 23-01-2025 ರ ಮಡಾಮಕ್ಕಿ ಗ್ರಾಮ ಪಂಚಾಯತಿಯ ಎಲಂ ಪ್ರಕಟಣೆಯ ದೃಢೀಕೃತ ನಕಲು, ಅಂಗಡಿ ಕೊಣೇ ಸಂ. 2/36 ರ ಬಹಿರಂಗ ಎಲಂನ ವಿವರದ ದೃಢೀಕೃತ ನಕಲು, ದಿಃ 04-02-2025 ರಂದು ಆರೋಪಿತನಿಗೆ ಕೊಟ್ಟ ನೋಟಿಸಿನ ದೃಢೀಕೃತ ನಕಲು, ದಿಃ 11-02-2025 ರ ಸಾಮಾನ್ಯ ಸಭಾ ನಡಾವಳಿ ಪುಸ್ತಕದ 3 ಪುಟಗಳುಳ್ಳ ದೃಢೀಕೃತ ನಕಲು, ದಿಃ 10-02-2025 ರ ಮಡಾಮಕ್ಕಿ ಗ್ರಾಮ ಪಂಚಾಯತಿ ಅಧ್ಯಕ್ಷರ ಆದೇಶ ದೃಢೀಕೃತ ನಕಲು, ಮಡಾಮಕ್ಕಿ ಗ್ರಾಮ ಪಂಚಾಯತಿ 2005-06 ನೇ ಸಾಲಿನ ಸ್ಥಿರಾಸ್ತಿಯ ರಜಿಸ್ಟರನ ದೃಢೀಕೃತ ನಕಲು, ಮಡಾಮಕ್ಕಿ ಗ್ರಾಮದ ಅಳತೆ ಪುಸ್ತಕದ 2 ಪುಟಗಳುಳ್ಳ ದೃಢೀಕೃತ ನಕಲು, ದಿಃ 13-06-2006 ರ ಸಾಮಾನ್ಯ ಸಭೆಯ 2 ಪುಟಗಳುಳ್ಳ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿ-2 ರಿಂದ ನಿಪಿ-16 ಎಂದು ಗುರುತಿಸಲಾಯಿತು.

5. ಅದೇ ದಿನ ಸಂಜೆ ಪೋಲಿಸರು ಪರಿಶೀಲನೆ ಮಾಡಿ, ಒಡೆದು ಕಲ್ಲಿನ 2 ಪೀಸುಗಳನ್ನು

ತೆಗೆದುಕೊಂಡು ಹೋಗಿರುತ್ತಾರೆ. ಸ್ಥಳ ದಲ್ಲಿ ಪೋಲಿಸರು ಮಹಜರು ಮಾಡಿ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿ ಮಹಜರನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿ.ಪಿ.17 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲೆ ಪೋಲಿಸರು ನಕ್ಷೆಯನ್ನು ತಯಾರಿಸಿದ್ದು, ಪೋಟೋವನ್ನು ತೆಗೆದಿರುತ್ತಾರೆ ಎಂದು ನುಡಿದು ನಕ್ಷೆ ಮತ್ತು ಪೋಟೋವನ್ನು ನಿಪಿ-18 ಮತ್ತು ನಿಪಿ-19 ಅಂತಲೂ ನಕ್ಷೆಯಲ್ಲಿರುವ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸದರಿ ಕೃತ್ಯದಿಂದ ರೂ.25,000/- ನಷ್ಟವಾಗಿರುತ್ತದೆ. ಕಳಚಿ ಬಿದ್ದ ಕಡುಮಾಡಿನ ತುಂಡುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಕೆ ಸಿ ಎಸ್ ವಕೀಲರಿಂದಃ</u>

1. ಈಗ 2 ವರ್ಷಗಳ ಹಿಂದೆ ನವೆಂಬರ್-2023 ರಲ್ಲಿ ಮಡಾಮಕ್ಕಿ ಗ್ರಾಮ ಪಂಚಾಯತಿಯ ಪಿ ಡಿ ಓ ಅಂತಾ ನೇಮಕಗೊಂಡಿರುತ್ತೇನೆ. ನಮ್ಮ ಕಚೇರಿಯಿಂದ ಕೃತ್ಯದ ಸ್ಥಳ 50 ಮೀಟರ್ ಅಂತರವಿರುತ್ತದೆ. ಕಟ್ಟಡ ನಿರ್ಮಾಣದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಆದರೆ ದಾಖಲೆಗಳ ಆಧಾರದ ಮೇಲೆ ಮಾಹಿತಿ ಇರುತ್ತದೆ. ಆ ಅಂಗಡಿಯ ಕೋಣೆ ಆರ್ ಸಿ ಸಿ ಕಟ್ಟಡವಾಗಿರುತ್ತದೆ. ಅದರ ನಿರ್ದಿಷ್ಟ ವಿಸ್ತೀರ್ಣ ಹೇಳಲು ಬರುವುದಿಲ್ಲ. ಆ ಕಟ್ಟಡದಲ್ಲಿ ಎಷ್ಟು ವಿಸ್ತೀರ್ಣದ ಕೋಣೆಗಳು ಇರುತ್ತದೆ ಅಂತಾ ನನಗೆ ಹೇಳಲು ಸಾಧ್ಯವಿಲ್ಲ.

2. ದೂರನ್ನು ಅಧ್ಯಕ್ಷರ ಆದೇಶದ ಮೇರೆಗೆ ಕೊಟ್ಟಿರುತ್ತೇನೆ. ದಿಃ 10-02-2025 ರಂದು ಅಧ್ಯಕ್ಷರು ಕೊಟ್ಟ ಪತ್ರದಂತೆ ನಾನು ದೂರು ಕೊಟ್ಟಿರುತ್ತೇನೆ. ಅಧ್ಯಕ್ಷರ ದಿಃ 10-02-2025 ಪತ್ರದಲ್ಲಿಯೂ ಸಹ ಕಡುಮಾಡು ಕಳಚಿ ತೆಗೆದಿರುತ್ತದೆ ಅಂತಾ ಕಂಡುಬರುತ್ತದೆ ಎಂದರೆ ಸರಿ. ಸದರ ದಾಖಲೆಯಲ್ಲಿ ಕಡುಮಾಡನ್ನು ಯಾರು ಕಳಚಿರುತ್ತಾರೆ ಅಂತಾ ಬರೆದಿರುವುದಿಲ್ಲ ಎಂದರೆ ಸರಿ. ಕಡುಮಾಡನ್ನು ಕೆಂಪು ಬಣ್ಣದ ಕಲ್ಲಿನಿಂದ ಕಟ್ಟಲಾಗಿತ್ತು ಅದರ ನಿರ್ದಿಷ್ಟವಾದ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಕಡುಮಾಡನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿರುವುದಿಲ್ಲ. ಕಡುಮಾಡನ್ನು ತೆಗೆದಿರುವುದನ್ನು ನೋಡಿದವರು ಯಾರು ಇರುವುದಿಲ್ಲ.

3. ಚಾಸಾ-3 ಸದಸ್ಯರಿರುತ್ತಾರೆ. ಚಾಸಾ-2 ನಮ್ಮ ಪಂಚಾಯತಿಯ ಕಾರ್ಯದರ್ಶಿಗಳು ಎಂದರೆ ಸರಿ. ಚಾಸಾ-4 ಸ್ಥಳೀಯರಿರುತ್ತಾರೆ. ಚಾಸಾ-5 ಅಧ್ಯಕ್ಷರಿರುತ್ತಾರೆ. ಚಾಸಾ-5 ಕಾಂಗ್ರೇಸ ಪಕ್ಷದವರು. ಆರೋಪಿ ಬಿಜೆಪಿ ಪಕ್ಷದವರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-5 ಮತ್ತು ಆರೋಪಿಗೆ ವೈಯಕ್ತಿಕವಾಗಿ ವೈಮನಸ್ಸು ಹಾಗೂ ಬಿನ್ನಾಭಿಪ್ರಾಯ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕಟ್ಟಡದ ಪಂಚಾಯತಿಯ ಸ್ವಂತ ಕಟ್ಟಡ, ಸಾರ್ವಜನಿಕ ಆಸ್ತಿಯಲ್ಲ. ಆ ಜಾಗ 4 ರಸ್ತೆ ಸೇರಮ ಸ್ಥಳ ಎಂದರೆ

ಸರಿ. ಅದು ತುಂಬಾ ಜನ ಸಂದಣಿ ಇರುತ್ತದೆ. ಕೆಲವೊಂದು ಸಮಯದಲ್ಲಿ ಮಾತ್ರ ಜನಸಂದಣಿ ಹೆಚ್ಚು ಇರುತ್ತದೆ. ಧರ್ಮಸ್ಥಳ ಗ್ರಾಮೀಣಾಬಿವೃದ್ಧಿ ಕಚೇರಿ ಇರುತ್ತದೆ. ಅಕ್ಕಪಕ್ಕ ಪಂಚಾಯತ ಅಂಗಡಿಗಳು ಇರುತ್ತವೆ ಮನೆಗಳು ಇರುವುದಿಲ್ಲ.

4. ನಾನು ಹೇಳುವ ರೀತಿ ಕಟ್ಟಡಕ್ಕೆ ಕಡುಮಾಡು ಇದ್ದಿದ್ದು ಇಲ್ಲ ಅದನ್ನು ಧ್ವಂಸಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಡುಮಾಡನ್ನು ಆರೋಪಿಗೆ ಮಾಡಿಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಆರೋಪಿಗೆ ಕೇವಲ ಕಟ್ಟಡವನ್ನು ಮಾತ್ರ ಕೊಟ್ಟಿದ್ದು ಕಡುಮಾಡನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಕಟ್ಟಡಕ್ಕೆ ಯಾವುದೇ ಕಡುಮಾಡು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಮು.ಮಾ.1 ಮತ್ತು 2 ಕ್ಕೂ ಮತ್ತು ಕಟ್ಟಡದ ಕಡುಮಾಡಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಹೋದಾಗ ಕಡುಮಾಡು ಯಾವುದೇ ಸಿಕ್ಕಿರುವುದಿಲ್ಲ. ಕಟ್ಟಡದಲ್ಲಿದ್ದ ಕಲ್ಲು ನಮಗೆ ಸಿಕ್ಕಿರುತ್ತದೆ. ಧ್ವಂಸವಾಗಿದ್ದ ಬಗ್ಗೆ ಕುರುಹುಗಳು ಕಾಣುತ್ತವೆ. ಮಣ್ಣು ಎಲ್ಲಾ ಮೇಲೆ ಎದ್ದು ಬಂದಿತ್ತು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಕ್ಕೆ ಬಂದಿರುವುದಿಲ್ಲ ಹಾಗೂ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ರವರಿಗೆ ಇದ್ದ ವೈಯಕ್ತಿಕ ದ್ವೇಷದ ಹಿನ್ನೇಲೆಯಲ್ಲಿ ಅವರು ಹೇಳಿದಂತೆ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**